# Visit of Minister of State for External Affairs and Culture Smt. Meenakashi Lekhi to Uzbekistan and Switzerland (September 23-30, 2021)

September 22, 2021

---

## ವಿದೇಶಾಂಗ ವ್ಯವಹಾರಗಳು ಮತ್ತು ಸಂಸ್ಕೃತಿ ರಾಜ್ಯ ಸಚಿವೆ ಶ್ರೀಮತಿ. ಮೀನಾಕ್ಷಿ ಲೇಖಿ ರವರ ಉಜ್ಬೇಕಿಸ್ತಾನ್ ಮತ್ತು ಸ್ವಿಟ್ಜರ್ಲೆಂಡ್ ಭೇಟಿ (ಸೆಪ್ಟೆಂಬರ್ 23-30, 2021)

ಸೆಪ್ಟೆಂಬರ್ 22, 2021

ವಿದೇಶಾಂಗ ವ್ಯವಹಾರಗಳು ಮತ್ತು ಸಂಸ್ಕೃತಿ ರಾಜ್ಯ ಸಚಿವೆ (ಎಮ್‌ಒಎಸ್) ಶ್ರೀಮತಿ. ಮೀನಕಾಶಿ ಲೇಖಿರವರು ದಿನಾಂಕ 23-30 ಸೆಪ್ಟೆಂಬರ್ 2021 ರಿಂದ ಉಜ್ಬೇಕಿಸ್ತಾನ್ ಗಣರಾಜ್ಯ ಮತ್ತು ಸ್ವಿಸ್ ಒಕ್ಕೂಟಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ.

2. ಸೆಪ್ಟೆಂಬರ್ 23-26ರವರೆಗೆ ಉಜ್ಬೇಕಿಸ್ತಾನಕ್ಕೆ ಭೇಟಿ ನೀಡಿದಾಗ, ರಾಜ್ಯ ಸಚಿವರು ಉಜ್ಬೇಕಿಸ್ತಾನದ ವಿದೇಶಾಂಗ ಸಚಿವ ಹೆಚ್.ಇ ಶ್ರೀ ಅಬ್ದುಲ್ ಝುಜ್ ಕಮಿಲೋವ್ ಮತ್ತು ಸಂಸ್ಕೃತಿ ಸಚಿವ ಹೆಚ್.ಇ ಶ್ರೀ ಓಝೋಡ್‌ಬೆಕ್ ನಜರ್‌ಬೆಕೊವ್  ಅವರನ್ನು ಭೇಟಿ ಮಾಡಲಿದ್ದಾರೆ. ಅವರು ಪ್ರತಿಷ್ಠಿತ ತಾಷ್ಕೆಂಟ್ ಕಾನೂನು ವಿಶ್ವವಿದ್ಯಾಲಯದಲ್ಲಿ 'ಭಾರತದ ಪ್ರಜಾಪ್ರಭುತ್ವ ಸಂಪ್ರದಾಯಗಳು' ಕುರಿತು ಉಪನ್ಯಾಸ ನೀಡಲಿದ್ದಾರೆ. ಅವರು ತಾಷ್ಕೆಂಟ್‌ನಲ್ಲಿರುವ ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಾದವನ್ನು ನಡೆಸುತ್ತಾರೆ ಮತ್ತು ತಾಷ್ಕೆಂಟ್ ಸ್ಟೇಟ್ ಇನ್‌ಸ್ಟಿಟ್ಯೂಟ್ ಆಫ್ ಓರಿಯಂಟಲ್ ಸ್ಟಡೀಸ್ ಮತ್ತು ಇತರ ಸಂಸ್ಥೆಗಳಿಂದ ಪ್ರಸಿದ್ಧ ಇಂಡಾಲಜಿಸ್ಟ್‌ಗಳನ್ನು ಭೇಟಿ ಮಾಡುತ್ತಾರೆ. ಸಮರಖಂಡ್ ರಾಜ್ಯ ವೈದ್ಯಕೀಯ ಸಂಸ್ಥೆಯಲ್ಲಿ ಭಾರತೀಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವುದರ ಜೊತೆಗೆ 'ಆಜಾದಿ ಕಾ ಅಮೃತ್ ಮಹೋತ್ಸವ' ಆಚರಣೆಯ ಅಂಗವಾಗಿ ರಾಜ್ಯ ಸಚಿವರು ಬುಖಾರ ರಾಜ್ಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

3. ಸೆಪ್ಟೆಂಬರ್ 27-30 ರಿಂದ ಸ್ವಿಜರ್‌ಲ್ಯಾಂಡ್‌ಗೆ ಭೇಟಿ ನೀಡುವ ಸಮಯದಲ್ಲಿ, ರಾಜ್ಯ ಸಚಿವರು ಹೆಚ್.ಇ ಡಾ. ಇಗ್ನಾಜಿಯೊ ಕ್ಯಾಸಿಸ್, ಫೆಡರಲ್ ಕೌನ್ಸಿಲರ್, ವಿದೇಶಾಂಗ ವ್ಯವಹಾರಗಳ ಸಚಿವಾಲಯ (ವಿದೇಶಾಂಗ ಸಚಿವ) ಮತ್ತು ಎಚ್.ಇ ಶ್ರೀ ಅಲೈನ್ ಬರ್ಸೆಟ್, ಫೆಡರಲ್ ಕೌನ್ಸಿಲರ್, ಗೃಹ ವ್ಯವಹಾರಗಳು ಮತ್ತು ಸಂಸ್ಕೃತಿ ಸಚಿವಾಲಯ ಇವರೊಂದಿಗೆ ಚರ್ಚೆ ನಡೆಸಲಿದ್ದಾರೆ. ರಾಜ್ಯ ಸಚಿವರು "ಉದಯೋನ್ಮುಖ ಮಾರುಕಟ್ಟೆಗಳಲ್ಲಿ ಮೂಲಸೌಕರ್ಯ - ಬೆಳವಣಿಗೆಯ ಎಂಜಿನ್ ಮತ್ತು ನೈಜ ಪರಿಣಾಮ" ಎಂಬ ವಿಷಯದ ಕುರಿತು ಉದ್ಘಾಟನಾ ಎನ್ ಝೊಡ್ ಝೊಡ್ ಹಣಕಾಸು ಸಮಾವೇಶ ಮತ್ತು ಸ್ವಿಸ್-ಇಂಡಿಯಾ ಚೇಂಬರ್ ಆಫ್ ಕಾಮರ್ಸ್+ನ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ . ರಾಜ್ಯ ಸಚಿವರು ಇಂಡೋ-ಸ್ವಿಸ್ ಸಮುದಾಯದೊಂದಿಗೆ ಸಂವಾದ ನಡೆಸಲಿದ್ದಾರೆ ಮತ್ತು ಜಿನೀವಾದಲ್ಲಿ ಅಂತಾರಾಷ್ಟ್ರೀಯ ಸಮುದಾಯದ ಸದಸ್ಯರನ್ನು ಭೇಟಿಯಾಗಲಿದ್ದಾರೆ.

4. ಭಾರತವು ಉಜ್ಬೇಕಿಸ್ತಾನ್ ಮತ್ತು ಸ್ವಿಟ್ಜರ್ಲ್ಯಾಂಡ್‌ಗಳೊಂದಿಗೆ ನಿಕಟ ಮತ್ತು ಸ್ನೇಹ ಸಂಬಂಧವನ್ನು ಹೊಂದಿದೆ. ರಾಜ್ಯ ಸಚಿವರ ಭೇಟಿಯು ಈ ಎರಡೂ ದೇಶಗಳೊಂದಿಗಿನ ನಮ್ಮ ದ್ವಿಪಕ್ಷೀಯ ಬಾಂಧವ್ಯದಲ್ಲಿ ಕಾರ್ಯಾಚಾರಣೆ ಶಕ್ತಿಯನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ.

**ನವ ದೆಹಲಿ**
**ಸೆಪ್ಟೆಂಬರ್ 22, 2021**

DISCLAIMER: This is an approximate translation. The original is available in English on MEA's website and may be referred to as the official press release.